Regd No M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 141] ಬುಧವಾರ 21—4—48 [ಬಿಡಿಪ್ರತಿ 3 ಪೆ

ಪಾಕಿಸ್ಥಾನದ ಕಥೆ—

ನಿತ್ಯ ಕಲ್ಯಾಣ

ಕುರುಕ್ಷೇತ್ರವು ಡಿಲ್ಲಿಯಿಂದ ಐವತ್ತು ಮೈಲಿ ಉತ್ತರದಲ್ಲಿದೆ. ಅದೊಂದು ವಿಶಾಲವಾದ ಮರುಭೂಮಿ. ಅದರ ಒಂದು ಮೂಲೆಯಲ್ಲಿ ಪಾಣಿಪತ್ ಎಂಬ ಚಿಕ್ಕ ಪಟ್ಟಣವಿದೆ. ಅದರ ಹತ್ತಿರ ಬಲು ವಿಶಾಲವಾದ ನಿರಾಶ್ರಿತರ ತಾಣವೇರ್ಪಡಿಸಲಾಗಿದೆ. ಪಂಜಾಬಿನಿಂದ ಸರ್ವಸ್ವವನ್ನೂ ಕಳೆದುಕೊಂಡು ಬಂದಿರುವ ಎಂಡು ಲಕ್ಷ ಮಂದಿ ದೀನರು ಅಲ್ಲಿ ಆಶ್ರಯವನ್ನು ಪಡೆದಿದ್ದಾರೆ. ಗಂಡಸರಾರೂ ಇಲ್ಲದ ಸಂಗಡಿಗೆ ಪ್ರತ್ಯೇಕ ಒಂದು ವಿಭಾಗವನ್ನು ನಿರ್ಮಿಸಿರುತ್ತಾರೆ. ಹಿಂದೊಸ್ಥಾನ ಸರಕಾರವೇ ಇವರನ್ನು ಅಷ್ಟಬಟ್ಟೆಗಳನ್ನೂ ಕೊಟ್ಟಿಗಿಸಿ ರಕ್ಷಿಸುತ್ತಿದೆ. ಹಿಂದೂ ಸಂಕಷ್ಟದಲ್ಲಿ ಹೀಗೆ ನಿರಾಶ್ರಿತರಾದವರ ಪೋಷಣೆಗಾಗಿಗೆ 15 ಲಕ್ಷ ರೂ. ಗಳನ್ನು ಖರ್ಚು ಮಾಡುತ್ತಿದೆ.

ಮೇಲೆ ಹೇಳಿದ ನಿರಾಶ್ರಿತ ಸ್ತ್ರೀ ವಿಭಾಗದಲ್ಲಿ ಯಾವಾಗಲೂ ಒಂಭೈನೂರ ಮಂದಿ ಇರುವರು. ಪಂಜಾಬ ಸರಕಾರಿ ಅಧಿಕಾರಿಗಳು ಪತ್ತೆ ಮಾಡಿಸಿ ಕಾಣೆಯಾದವರನ್ನು ಹಿಂದೂಸ್ಥಾನದ ಬೇರೆ ಬೇರೆಗೆ ಸೇರಿಸುತ್ತಿರುವರು. ಈ ಕಾರ್ಯದ ಅಧಿಕಾರಿಗಳು ಅವರ ಸ್ವಂತ ಊರು ಕೇರಿಗಳನ್ನು ವಿಚಾರಿಸಿ ಪತ್ತೆ ಮಾಡಿಸುವರು ಅಥವಾ ಹತ್ತಿರದ ಬಂಧುಗಳಿದ್ದರೆ ಅವರ ವಶಕ್ಕೆ ಕೊಡುವರು. ಈ ಕಾರ್ಯವು ನಿತ್ಯವೂ ನಡೆಯುತ್ತಿರುವುದು.

ಈ ಸ್ತ್ರೀಯರ ವ್ಯವಸ್ಥೆಯು ಅಧಿಕಾರಿಗಳಿಗೊಂದು ಸಮಸ್ಯೆಯಾಗಿ ನಿಂತಿದೆ. ಇವರು ಮುಸಲ್ಮಾನರ ಒಲತ್ಕಾಂಕ್ಷೆಗೆ ಒಳಗಾದವರು. ಅನೇಕರು ಅವರ ಮನೆಗಳಲ್ಲಿ ಬೆರೆತು ಇದ್ದವರು; ಅಭೋಜ್ಯಗಳನ್ನು ಭಕ್ಷಿಸುವಂತೆ ಒತ್ತಾಯಿಸಲ್ಪಟ್ಟವರು, ಮುಸಲ್ಮಾನರೊಡನೆ ಮದುವೆಯ ತಂತ್ರವನ್ನೂ ಅನುಭವಿಸಿಕೊಂಡವರು. ಈ ದುರ್ಘಟನೆಗಳಿಗಾಗಿ ಅವರು ಕುದಿಯುತ್ತಿರುವರು. ನಾವೇಕೆ ಬದುಕಿಕೊಂಡೆವೆಂದು ಸಂತಪಿಸುವರು. ಇಂತಹವರನ್ನು ಹಿಂದೂ ಸಮಾಜದಲ್ಲಿ ಯಾವ ಸ್ಥಾನಮಾನಗಳನ್ನಿತ್ತು ಶಾಪಾಡುವುದೆಂಬುದೇ ಸಮಸ್ಯೆಯಾಗಿದೆ. ಮದುವೆಯಾಗದ ಕನ್ಯೆಯರೂ, ಯುವತಿಯರೂ ಈ ದುರ್ಘಟನೆಗಳಿಂದ ಎಷ್ಟು ಹಿಂಸೆಯನ್ನನುಭವಿಸಿರೋ ಊಹಿಸುವುದೂ ಕಷ್ಟವಾಗಿದೆ. ಇವರಲ್ಲಿ ಹೆಚ್ಚಿನವರು ಹಮ್ಮ ಭವಿಷ್ಯವು ಕೆಟ್ಟುಹೋಯಿತೆಂದು ನಿರಾಶರಾಗಿದ್ದಾರೆ. ಇದು ಕೆಲವರು ಮದುವೆಯಾಗಿ ಸುಖಜೀವನವನ್ನು ನಡೆಸಬೇಕೆಂದು ಆಶೆಯುಳ್ಳವರಾಗಿದ್ದಾರೆ, ಆದರೆ ತಮ್ಮನ್ನು ಯಾರು ಮದುವೆಯಾಗುವರು? ಯಾರು ಘಟನೆ ನಡೆಸುವರು? ಯಾರು ತಮಗಾಶ್ರಯವೀಯುವರೆಂಬುದು ಅವರಿಗೇ ಗೊತ್ತಿಲ್ಲ. ಹೀಗೆ ಆಶಾನಿರಾಶಾಗಳಿಂದ ಅವರು ತುಂಬ ಜರ್ಝರಿತರಾಗಿದ್ದಾರೆ. [ಸಶೇಷ

ಮದರಾಸಿಗೆ ಅಕ್ಕೀ ಕಾವು !

ಕಾಲೇಜು ವಿದ್ಯಾರ್ಥಿಗಳ ಸಭೆ

ಪಬ್ಲಿಕ್ ಪರೀಕ್ಷೆಗಳ ಬಗ್ಗೆ ತಮ್ಮ ನೀತಿಯನ್ನು ನಿರ್ಧರಿಸಲು ಮತ್ತು ತಮ್ಮ ಬೇಡಿಕೆಗಳನ್ನು ವಿದ್ಯಾ ಸಚಿವರ ಮುಂದಿಡಲು ಒಂದು ನಿಯೋಗ ಗೋಷ್ಟಿಯನ್ನು ರಚಿಸಲು ನಾಳೆ (ತಾ॥ 22) 11-30 ಗಂಟೆಗೆ ಮಹಾರಾಜಾ ಕಾಲೇಜು ಮುಂಭಾಗದಲ್ಲಿ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳ ಸಭೆ ಸೇರಲಿದೆ. ವಿದ್ಯಾರ್ಥಿಗಳೆಲ್ಲರೂ ತಪ್ಪದೆ ಬಂದು ತಮ್ಮ ಕಾಲೇಜುಗಳ ಪ್ರತಿನಿಧಿಗಳನ್ನು ಚುನಾಯಿಸಬೇಕು ಮತ್ತು ತಮ್ಮ ಬೇಡಿಕೆಗಳನ್ನು ಸಭೆ ಮುಂದೆ ತಿಳಿಸಬೇಕಾಗಿ ಶ್ರೀ ಶಾಂತರಾಜ್‌ರವರು ಕೋರಿದ್ದಾರೆ.

— ....

ದೆಹಲಿ—ಬ್ರಿಟಿಷ್ ಪಾರ್ಲಿಮೆಂಟಿನ ಸರ್ವಪಕ್ಷ ಸಮಿತಿಯವರು ವಿಶ್ವ ಸರಕಾರ ಸ್ಥಾಪಿಸಜೇಕೆಂಬ ಅವರ ಯೋಜನೆ ಬಗ್ಗೆ ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ಪ್ರಚಾರ ನಡೆಸಲು ನಿರ್ಧರಿಸಿದ್ದಾರೆ.

ಇಂದಿನ ವರ್ತಮಾನ

ಜಮ್ಮು — ಸುಮಾರು ೧೦೪೦ ಜನರನ್ನು ಶತ್ರುಗಳು ಸುತ್ತುಗಟ್ಟಿದ್ದರು; ಈ ಪೈಕಿ ೩೦೦ ಜನ ಮುಸ್ಲಿಮರೂ ಇದ್ದರು: ಆದರೆ ಭಕರಶೀಯ ಸೇನೆಗಳು ಅವರನ್ನು ಶತ್ರುಗಳಿಂದ ಪಾರು ಮಾಡಿದ್ದಾರೆ

ಂ ಂ

ನಾರ್‌ಕಿಂಗ್— ಚೀನಾದ ಲ್ಲಧ್ಯಕ್ಷರಾಗಿ ಚಿಯಾಂಗ್ ಕೈಷೇಎರು ಚುನಾಯಿತರಾದರು

ಂ ಂ

ಗಂಟಕಲಿ ಹುಬ್ಲಿ ರೈಲನ್ನು ಸುಮಾರು ೫೦ ಜನ ಅರಬರು ನೈಜಾಂ ಗಡಿಯಲ್ಲಿ ತಡೆಗಟ್ಟಿದಾಗ ಪೋಲೀಸರಿಗೂ ಅವರಿಗೂ ಘರ್ಷಣೆ ನಡೆದು ಒಬ್ಬ ಅರಬ್ಬನು ಸತ್ತು ಇನ್ನೂ ಕೆಲವರು ಗಾಯಗೊಂಡರೆಂದು ತಿಳಿಯಬಂದಿದೆ

ಂ ಂ

ಬೆಂಗಳೂರು.... ಸರ್ಕಾರಿ, ಕೈಗಾರಿ ಕೋದ್ಯೋಗಿಗಳ ಮತ್ತು ಕಾರ್ಮಿಕರ ಸಮ್ಮೇಳನವು. ತಾ॥ ೨೭, ೨೮, ೨೯ ರಲ್ಲಿ ನಡೆಯುವುದು

ಂ ಂ

ಲಂಡನ್.... ಇಟಲಿಯ ಚುನಾವಣೆಯಲ್ಲಿ ಕಮ್ಯೂನಿಸ್ಟರಿಗೆ ಸೋಲಾದರೆ ಅವರು ಹತಾಶರಾಗಿ ಸಶಸ್ತ್ರದಂಗೆ ನಡೆಸಿ ಅಧಿಕಾರವನ್ನು ಹತೋಟಿಪಡಿಸಿಕೊಳ್ಳಲೆತ್ನಿಸಬಹುವೆಂದು ಹೇಳಲಾಗಿದೆ

ಂ ಂ

ಲಂಡನ್—ಬ್ರಿಟನ್ನಿನಲ್ಲಿ ೫೨ ಫಾಸಿಸ್ಟ ಪಕ್ಷವಾದ ಸಂಸ್ಥೆಗಳು ಮೂರು ವೇಷದಲ್ಲಿವೆಯೆಂದೂ, ಈ ಪೈಕಿ ೫೭ ಪುಸ್ತಕ ಕ್ಲಬ್ಬುಗಳೆಂದೂ ಇಲ್ಲಿ ಲಾ ರಹಸ್ಯ ಜರ್ಚೆ ನಡಿಯುತ್ತದೆಂದೂ ಹೇಳಲಾಗಿದೆ

ಮದರಾಸಿಗೆ ಅಕ್ಕಿ ಕ್ಷಾಮ

ಈಗಿನ ಲೆಕ್ಕಾಚಾರ ಪ್ರಕಾರ ಪ್ರ ವರ್ಷ ಮದರಾಸು ಅಕ್ಕಿ ಕ್ಷಾಮವನ್ನು ಎದುರಿಸಬೇಕಾದೀತೆಂದು ಹೇಳಲಾಗಿದೆ

ಂ ಂ

ಗೌ ॥ ಜ ॥ ಮೌಂಟುಬೇಟನ್ನರು

ಇವರು ಮೈಸೂರಿನಲ್ಲಿ ತಾ ॥ ೨೧ ರಿಂದ ೨೪ ರವರಿಗೆ ಇರುವರು. ಈ ವಿಷಯ ಸಂಜೆ ರಾಜಧಾನಿಯ ಪೌರಸಭೆಯು ಮಾನಪತ್ರ ಸ್ವೀಕರಿಸುವುದು.

ಂ ಂ

ರಾಜ್ಯಾಂಗ ರಚನಾ ಸಭೆ

ಬೆಂಗಳೂರು ಏ ೨೦.... ನಿರ್ಣಯಗಳ ಕನ್ನಡ ಇಂಗ್ಲೀಷುಗಳಲ್ಲಿ ಕಳುಹಿಸಬೇಕೆಂದೂ, ಸಭೆ [illegible] ಇಂಗೀಷ [illegible] ಯಿತು .... [illegible] ಮಿತಿಗಳಿಗೆ ಒ [illegible] ಶ್ರೀ ಗಾಂಜಾವೀರಪ್ಪ [illegible] ಧ್ಯಕ್ಷರಾಗಿ ಚುನಾಯಿಸಲ್ಪಟ್ಟು —ಸಭೆಯು ಮೇ 3 ಕ್ಕೆ ಮುಂದುವರಿಸಲಾಯಿತು.

ಂ ಂ

ಪರೀಕ್ಷೆ ಮುಂದೆ ಹೋಗಲಿ

ಬೆಂಗಳೂರು .... ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಬೆಂಗಳೂರು ವಿದ್ಯಾರ್ಥಿಗಳ ಸಭೆಯಲ್ಲಿ ತೀರ್ಮಾನ ಮಾಡಿರುವರು

ಂ ಂ

ಭಾರತ ನಿರಾಕರಿಸಿತು

ಲೇಕ್ ಸಕ್ಸಸ್— ಭದ್ರತಾ ಸಮಿತಿ ಮುಂದೆ ಬಂದ ಕಾಶ್ಮೀರ ಸಂಬಂಧದ ಸೂಚನೆಯನ್ನು ಭಾರತವು ನಿರಾಕರಿಸಿದೆ

ಂ ಂ

ಸ್ವಾಮಿ ರಮಾನಂದ ತೀರ್ಥ [illegible] ಹೈದರಾಬಾದು — ಉಪವಾಸ ತ್ಯಾಗ್ರಹ ನಡೆಸುತ್ತಿರುವ ಇವರ ಚಿಂತಾಜನಕವಾಗಿದೆ

ಂ ಂ

೨೫೦೧ ವರ್ಷಗಳ ಹಿಂದಿನದು

ರಂಗೂನ್— ಬಾಂಬಿನಿಂದ ಒಡೆದು ಹೋಗಿದ್ದ ಒಂದು ಗೋಪುರ ರಿಪೇರಿ ಮಾಡುತ್ತಿದ್ದಾಗ ಸಿಕ್ಕಿದ ಪೆಟ್ಟಿಗೆಯಲ್ಲಿ ಸಾವಿರಾರು ರೂಪಾಯಿ ಬೆಲೆಯ ಪಚ್ಚೆ ಪಚ್ಚೆ ಭಂಗಾರದ ಪುಡಿ ಸಿಕ್ಕಿದೆ: ಅದರಲ್ಲಿದ್ದ ೨ ಗೊಂಚಲು ಪವಿತ್ರ ಬುದ್ಧನದೆಂದು ಹೇಳಲಾಗಿದೆ

' ಸಿಂಹನಾದ '

ಮೇಲ್ಕಂಡ ಹೆಸರಿನಿಂದ ಮೈಸೂರಿನ ಪ್ರಸಿದ್ಧ ಪತ್ರಿಕೋದ್ಯೋಗಿ ಶ್ರೀ ಬಿ. ಶ್ರೀಕಂಠಯ್ಯನವರು ಪ್ರಕಟಿಸಲು ಪ್ರಾರಂಭಿಸಿರುವ ' ಸಿಂಹನಾದ ' ವಾರ ಪತ್ರಿಕೆಯನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಸ್ವಾರಸ್ಯವಾದ ಲೇಖನಗಳಿಂದ ತುಂಬಿದೆ.

ಈ ಕೆಳಗೆ ಕಂಡ ಲೇಖನವು ' ಸಿಂಹನಾದ ' ದಿಂದ ಎತ್ತಿ ಪ್ರಕಟಿಸಲಾಗಿದೆ.

ಸಚಿವರುಗಳೇನುಮಾಡುತ್ತಿದ್ದಾರೆ?



ದ್ದಾರೆ !

ಈ ರಾಜಾಸಾಮಾನ್ಯದಲ್ಲಿ ಮಥನವಾಗುತ್ತಿದೆ. ಆ ಕಾಲದಲ್ಲಿ ಅನೇಕ ಟೀಕೆಗಳು ಏಳುತ್ತಿವೆ. ಅವು : ' ಕಾಸಿಗೊಂದು ಕೊಸರಿಗೊಂದು ಸಚಿವರಾಗಿ ಹೋದರು. ಒಂದು ಹಳೇ ಮೋಟುಗೋಡೆಯನ್ನು ಮೇಲೇರಿಸುವ ಸಮಾರಂಭಕ್ಕೂ ಸಚಿವರುಗಳದೇ ಉದ್ಘಾಟಿಭಾಷಣ, ಅಧ್ಯಕ್ಷಭಾಷಣ. ಸಚಿವಸ್ಥಾನಗಳ ಮರ್ಯಾದೆಯೇ ಮಣ್ಣುಪಾಲಾಯ್ತು. ಎಲ್ಲಾ ಬೇಕಾಬಿಟ್ಟಿಯಾಗಿಹೋಯಿತು. ಸಚಿವರ ಕಾರಿನಲ್ಲಿ ಅದೆಷ್ಟು ಜನ ಕುರಿತುಂಬಿದಹಾಗೆ ತುಂಬಿಕೊಳ್ಳುತ್ತಾರೆ ! ಅವರು ಬರುತ್ತೇನೆಂದು ಒಪ್ಪಿಕೊಳ್ಳುವ ಕಾಲವ್ಯಾವುದು ? ಬರುವ ಅವೇಳೆ ಅದೇನು ! ನೀಡುವ ಭರವಸೆಗಳದೆಷ್ಟು ? ಅತ್ಯಲ್ಪ ಅಡಳಿತವದೇನು ? ಈ ಕಳೆದ 150 ದಿನಗಳಲ್ಲಿ 100 ದಿನಗಳಲ್ಲಾ ಒರೇ ಟೂರೇ ಆಗಿಂಬೇಕು, ಪ್ರತಿ ದಿನಾ 1500 ಭಾಷಣಗಳನ್ನೇ ಮಾ 2 ಸಾವಿರ ಹಾಂಗಳು 1 ಬೇಷಣ್ಣುಗಳನ್ನು ಸ್ವೀಕರಿಸಿ ಡಿಂಬೇಕು, ಸಾವಿರಕ್ಕೆ ಯಲ್ಲದೆ ಟೀ ಪಾರ್ಟಿಗಳಲ್ಲಿ ಭಾಗವಹಿಸಿ ರುಚಿಯಿ ತಿನಸುಗಳನ್ನು ನಾಲಿಗೆಗೆ ಸೋಕಿಸಿಂಬೇಕು. ಅದರೆ ವಿನಿಸ್ಟ್ರಿ ಟೇಬಲ್ ಮುಂದೆ ಕೂತು ಜನಸಾಮಾನ್ಯರ ಹಿತಸಾಧನೆಗಾಗಿ ಎಂತಿಷ್ಟು ಆಜ್ಞೆ ಹೊರಡಿಸಿದ್ದಾರೆ? ಎಂದಲ್ಲಿ ಮೇಲಿನಂತೆ ಸಂಭಾಗವಾಗಿ ' ಸಾವಿರಾರು ' ಎನ್ನಲಾದೀತೇ ? (ಸಿಂಹನಾದ)

ಬೇಸಿಗೆ ಬಿಸಲಿನ

ತಾಪಕ್ಕೆ ಹೆದರಬೇಡಿ

ಅಯ್ಯಂಗಾರ್ಯರಿಂದ ತಯಾರಾದ ತಂಪಾದ, ಶುಚಿಯಾದ, ರುಚಿಯಾದ ಉತ್ಕೃಷ್ಟ ಹಣ್ಣುಗಳಿಂದ ತಯಾರಾದ ಪರಬತ್ತನ್ನು ಸೇವಿಸಿ ಆನಂದಿಸಿರಿ.

ಅಯ್ಯಂಗಾರ್ ಸ್ಕ್ವೇಸ್ಟ್

ನೂರಡಿ ರಸ್ತೆ, ಮೈಸೂರು

Woodlands

From 19–4–48

EVENING SHOWS

4 days only Daily 3 Shows

Reap the Wild Wind

(Technicolour)

ರೀಪ್ ದಿ ವೈಲ್ಡ್ ವಿಂಡ್

(ವರ್ಣರಂಜನ ಚಿತ್ರ)

At Opera

20–4–48 ರಿಂದ

ಪವನ

ಗೀತಾ ಸಿನಿಮಾ, ಜೈರಾಜ್

ಪಾತ್ರವಹಿಸಿರುವ

[ಹಿಂದಿ)

ಪ್ರತಿ ದಿನ 3 ಆಟಗಳು

Good Printing

L. N. Press

Sivarampet, Mysore

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

' ಪ್ರಬೋಧ ' ಪುಟದಿಂದೊಡಗೂಡಿದ ಸೋಮವಾರ ಸಂಚಿಕೆ ವಾರ್ಷಿಕಚಂದಾ, ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1–13–0

Save the Cow

ಗೋವಧೆ ನಿಲ್ಲಲಿ

Edited, Printed and Published by M S Krishna Rao at the Satyavadi Press, Chamaraj Agrahar, Mysore

ಸಂಸಾರ ನಡೆಸುವ ಶಿಕ್ಷಣ

Advertise in ' Satyavad

ಹೊಸ ಬೆಳಕು, ಆರಿಸಿ ತೆಗೆದ, ಪರಿಶುದ್ಧವಾ

ಶ್ರೀ 'ಓಂ' ಗುರುತಿನ ಕೇ

ಈ ಓಂ ಗುರುತಿನ ಕೇಸರಿ ಅತಿ ಪರಿಶುದ್ಧವಾದುದಕ್ಕೆ ಗ್ಯಾರಂಟಿಯಾದುದು. ಸ್ಪೇನಿನ ಕೇಸರಿ ಗಿಡಗಳಲ್ಲಿಯೆ ಹೂಗಳಿಂದ ಆರಿಸಿ ತೆಗೆದುದಾಗಿದೆ. ನಮ್ಮಿಂದ ಸ್ಪೆಷಲ್ಲಾಗಿ ಆಮದು ಮಾಡಲ್ಪಟ್ಟಿರತಕ್ಕದ್ದು. ಬಹು ಹೊಳಪಿನಿಂದಲೂ ಸುವಾಸನೆಯಿಂದಲೂ ಕೂಡಿದುದಾಗಿದೆ. ಏನೊಂದೂ ಆಕ್ಷೇಪಣೀಯ ಪದಾರ್ಥಗಳೂ ಸೇರಿಲ್ಲ. ಮತ್ತು ಧಾರ್ಮಿಕವಾಗಿ ಪರಿಶುದ್ಧವಾಗಿದೆ. ದೇವಸ್ಥಾನಗಳಲ್ಲಿಯೂ, ದೇವರ ಪೂಜೆಗೂ, ಔಷಧಗಳಿಗೂ, ಮತ್ತು ತಿಂಡಿಪದಾರ್ಥಗಳಿಗೂ ಉಪಯೋಗಿಸಲ್ಪಡಲು ಅರ್ಹವಾಗಿದೆಯೆಂದು ಶಿಫಾರಸ್ಸುಮಾಡಲಾಗಿದೆ. ½ ತೋಲಾ, 1 ತೋಲಾ, ಡಬ್ಬಗಳಲ್ಲಿಯೂ, ಚಿಲ್ಲರೆಯಾಗಿಯೂ ದೊರೆಯುತ್ತದೆ. ಉಪಯೋಗಿಸಬೇಕಾಗಿ ವಿನಂತಿ.

ವಲ್ಲಭದಾಸ್ ತೇಜ್‌ಪಾಲ್

೧೪ ಗೋವಿಂದಪ್ಪ ನಾಯಕ್ ರಸ್ತೆ, ಜಿ. ಪಿ. [illegible]